2019 ಕ.ತೀ.ವ 640

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

## ಶ್ರೀ ಆಯೋ ಕ್ರಸ್ಟಾ ಮತ್ತು ಇನ್ನೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅರ್ಜಿ

ಕಾನೂನು ಮಾಪನಶಾಸ್ತ್ರ ಅಧಿನಿಯಮ, 2009ರ 18(1), 31 ಮತ್ತು 36(1)ನೇ ಪ್ರಕರಣಗಳು.

ಕಾನೂನು ಮಾಪನಶಾಸ್ತ್ರ ನಿಯಮಗಳು, 2011

ಇಲ್ಲಿನ ಎಲ್ಲ ಮೊಕದ್ದಮೆಗಳಲ್ಲಿ, ಪ್ರತಿವಾದಿ–ಕಾನೂನು ಮಾಪನ ನಿರೀಕ್ಷಕರು (ಇನ್‌ಸ್ಪೆಕ್ಟರ್), ಮಂಗಳೂರು ಉಪ–ವಿಭಾಗ, ಮಂಗಳೂರು ಇವರು, ಕಾನೂನು ಮಾಪನ ಶಾಸ್ತ್ರ ಅಧಿನಿಯಮ, 2009ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ) 18(1), 31, 36(1)ನೇ ಪ್ರಕರಣಗಳ ಅಡಿಯಲ್ಲಿ ಹಾಗೂ ಕಾನೂನು ಮಾಪನಶಾಸ್ತ್ರ (ಪ್ಯಾಕ್ ಮಾಡಿದ ಪದಾರ್ಥಗಳು) ನಿಯಮಗಳು, 2011ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ನಿಯಮಗಳು' ಎಂದು ಉಲ್ಲೇಖಿಸಲಾಗಿದೆ) 11(1)(ಇ), 18, 6(1), (ಡಿ), (ಇ), (ಎಫ್) ಮತ್ತು 6(2) ನಿಯಮಗಳನ್ನು ಉಲ್ಲಂಘನೆ ಮಾಡಿದ್ದಕ್ಕಾಗಿ, ಅರ್ಜಿದಾರರ ವಿರುದ್ಧ ಆರೋಪಗಳನ್ನು ಹೊರಿಸಿ ಖಾಸಗಿ ದೂರುಗಳನ್ನು ಸಲ್ಲಿಸಿದ್ದಾರೆ. ಕೆಲವು ಪ್ರಕರಣಗಳಲ್ಲಿ, 4(1)(ಡಿ)

*ಕ್ರಿ.ಅರ್ಜಿ ಸಂ: 8106/2013 ಇದರೊಂದಿಗೆ ಇತರೆ, ದಿನಾಂಕ 10ನೇ ಜುಲೈ, 2018.

ನಿಯಮವನ್ನು ಉಲ್ಲಂಘಿಸಲಾಗಿದೆ ಎಂದು ಹಾಗೂ ಇನ್ನು ಕೆಲವು ಪ್ರಕರಣಗಳಲ್ಲಿ 6(1)(ಎ), (ಡಿ), (ಇ) ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಲಾಗಿದೆ.

ಇದರಲ್ಲಿನ ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಕೆಲವು ಪ್ರಕರಣಗಳಲ್ಲಿ 6(1)ನೇ ನಿಯಮ, 4 ಮತ್ತು 6(3)ನೇ ನಿಯಮಗಳನ್ನು ಅನ್ವಯಿಸಿ, ಮೇಲೆ ಹೇಳಿದ ಕ್ರಿಮಿನಲ್ ದೂರುಗಳ ಮೂಲಕ ಪ್ರತಿವಾದಿಯು ನಿಯಮಗಳನ್ನು ಅನ್ವಯಿಸಿದಾಗ್ಯೂ, ಅಧಿನಿಯಮದ 18(1)ನೇ ಪ್ರಕರಣವನ್ನು ಅಥವಾ 36(1)ನೇ ಪ್ರಕರಣವನ್ನು ಅನ್ವಯಿಸುವಂತೆಯೇ ಇಲ್ಲ. ಕ್ರಿಮಿನಲ್ ಅರ್ಜಿ ಸಂಖ್ಯೆ. 8106/2013ರಲ್ಲಿ ಸಹ, 6(1) ನಿಯಮದ (ಎ)ಯಿಂದ (ಡಿ)ವರೆಗಿನ ಖಂಡಗಳು ಅನ್ವಯವಾಗುತ್ತವಾದರೂ, ಪುನಃ ಅಧಿನಿಯಮದ 18ನೇ, 31ನೇ ಮತ್ತು 36(1)ನೇ ಪ್ರಕರಣಗಳು ಅನ್ವಯವಾಗುವುದೇ ಇಲ್ಲ ಎಂದು ಪಟ್ಟುಬಿಡದೆ ವಾದಿಸಿದ್ದಾರೆ.

ತಯಾರಕನಿಗೆ ಅಥವಾ ಚಿಲ್ಲರೆ ವ್ಯಾಪಾರಿಗೆ ಅಥವಾ ಮಾರಾಟಗಾರನಿಗೆ, ಯಾವುದೇ ತೂಕ ಅಥವಾ ಮಾಪನ ಅಥವಾ ಯಾವುದೇ ದಸ್ತಾವೇಜು, ರಿಜಿಸ್ಟರ್ ಅಥವಾ ಅದಕ್ಕೆ ಸಂಬಂಧಿಸಿದ ಇತರ ದಾಖಲೆಯನ್ನು ತಪಾಸಣೆಗಾಗಿ ತನ್ನ ಮುಂದೆ ಹಾಜರುಪಡಿಸಬೇಕೆಂದು, ನಿರ್ದೇಶಕರು ಅಥವಾ ನಿಯಂತ್ರಕರು ಅಥವಾ ಯಾರೇ ಕಾನೂನು ಮಾಪನ ಅಧಿಕಾರಿಯು ಅಗತ್ಯಪಡಿಸಿದಾಗ, ಯಾವುದೇ ಸೂಕ್ತ ಕಾರಣವಿಲ್ಲದೆ ಹಾಗೆ ಮಾಡಲು ತಪ್ಪಿದಲ್ಲಿ ಅಥವಾ ವಿಫಲನಾದಲ್ಲಿ, ಆಗ ಮೇಲೆ ಹೇಳಿದ ಉಪಬಂಧದ ಅಡಿಯಲ್ಲಿ ಆ ವ್ಯಕ್ತಿಯು ದಂಡನೀಯನಾಗುವನು. ಆದುದರಿಂದ, ತಯಾರಕನು ಅಥವಾ ಚಿಲ್ಲರೆ ವ್ಯಾಪಾರಿಯು ನಿರ್ವಹಿಸುವ ಯಾವುದೇ ದಾಖಲೆ ಅಥವಾ ರಿಜಿಸ್ಟರು ಅಥವಾ ವರದಿಗಳನ್ನು ಹಾಜರುಪಡಿಸದೆ ಇದ್ದರೆ, ಆಗ 31ನೇ ಪ್ರಕರಣವು ಅನ್ವಯವಾಗುತ್ತದೆ ಮತ್ತು ಯಾವುದೇ ತೂಕ ಅಥವಾ ಮಾಪನವನ್ನು ಅಥವಾ ತೂಕ ಮತ್ತು ಮಾಪನಕ್ಕೆ ಸಂಬಂಧಿಸಿದ ಯಾವುದೇ ದಸ್ತಾವೇಜು, ರಿಜಿಸ್ಟರ್ ಅಥವಾ ಇತರ ದಾಖಲೆಯನ್ನು ಹಾಜರುಪಡಿಸಲು ಕೇಳಿದಾಗ ಹಾಜರುಪಡಿಸದಿದ್ದರೆ, ಆಗ ಸಹ 31ನೇ ಪ್ರಕರಣವು ಅನ್ವಯವಾಗುತ್ತದೆ.

ಈ ನಿರ್ದಿಷ್ಟ ಮೊಕದ್ದಮೆಯಲ್ಲಿ, 4(ಎ) ಕಂಡಿಕೆಗೆ ಸಂಬಂಧಿಸಿದ ರಾಜಿ ನೋಟೀಸನ್ನು ನೀಡಿದಾಗ, ಚಿಲ್ಲರೆ ವ್ಯಾಪಾರಿಯು ಮೊಕದ್ದಮೆಯನ್ನು ಬಗೆಹರಿಸಿಕೊಳ್ಳಲಿಲ್ಲವೆಂದು 5(ಎ) ಕಂಡಿಕೆಯಲ್ಲಿನ ದೂರಿನಲ್ಲಿ ಹೇಳಲಾಗಿದೆ. ಅಧಿನಿಯಮದ 31ನೇ ಪ್ರಕರಣದ ಅಡಿಯಲ್ಲಿ ಅಪರಾಧವನ್ನುಂಟು ಮಾಡುವ ಸದರಿ ಉತ್ಪನ್ನಗಳ ಖರೀದಿ ದರಪಟ್ಟಿಯನ್ನು ಸಹ ಆತನು ಸಲ್ಲಿಸಿಲ್ಲವೆಂದು ನಿವೇದಿಸಲಾಗಿದೆ. ಪ್ಯಾಕೇಜ್ ಒಳಗಿನ ವಸ್ತುಗಳ ನಿರ್ದಿಷ್ಟ ತೂಕ ಅಥವಾ ನಿರ್ದಿಷ್ಟ ಘಟಕ ಅಥವಾ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯಾವುವೇ ಆರೋಪಗಳು ಇಲ್ಲದೆ ಇದ್ದಾಗ, ಯಾವುದೇ ತೂಕ ಅಥವಾ ಮಾಪನಕ್ಕೆ ಸಂಬಂಧಿಸಿದ ದಸ್ತಾವೇಜುಗಳನ್ನು ಹಾಜರುಪಡಿಸುವ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸದಿರುವ ಯಾವುದೇ ಪ್ರಶ್ನೆಯು, ಅಧಿನಿಯಮದ 31ನೇ ಪ್ರಕರಣವನ್ನು ಅನ್ವಯಿಸುವುದಿಲ್ಲ. ಆದುದರಿಂದ, ತೂಕ ಮತ್ತು ಮಾಪನದಲ್ಲಿ ಯಾವುದೇ ವ್ಯತ್ಯಾಸವಿದ್ದರೆ ಮತ್ತು ಆ ಪರಿಣಾಮಕ್ಕೆ ಆರೋಪವನ್ನು ಮಾಡಲಾಗಿದ್ದರೆ, ತೂಕ ಮತ್ತು ಮಾಪನವನ್ನು ನಿರ್ಧರಿಸುವ ಸಲುವಾಗಿ ಅಥವಾ ತೂಕ ಮತ್ತು ಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವುದು ಅಗತ್ಯವಾಗಿದ್ದರೆ ಮತ್ತು ತಯಾರಕನಾಗಲಿ ಅಥವಾ ಚಿಲ್ಲರೆ ವ್ಯಾಪಾರಿಯಾಗಲಿ ಅದನ್ನು ಹಾಜರುಪಡಿಸದೆ ಇದ್ದರೆ, ಆಗ ಮಾತ್ರ ಅಧಿನಿಯಮದ 31ನೇ ಪ್ರಕರಣವು ಅನ್ವಯವಾಗುತ್ತದೆ. ಆದುದರಿಂದ, ನನ್ನ ಅಭಿಪ್ರಾಯದಲ್ಲಿ, ಮೇಲೆ ಹೇಳಿದ ಮೊಕದ್ದಮೆಗಳಲ್ಲಿ, ಅಧಿನಿಯಮದ 18(1)ನೇ ಪ್ರಕರಣವಾಗಲಿ ಅಥವಾ 36(1)ನೇ ಪ್ರಕರಣವಾಗಲಿ ಅಥವಾ 31ನೇ ಪ್ರಕರಣವಾಗಲಿ ಅನ್ವಯವಾಗುವುದಿಲ್ಲ.

ಆದಾಗ್ಯೂ, ದೂರುಗಳಲ್ಲಿ ಮಾಡಿದ ಆರೋಪಗಳಿಂದ ಕಂಡುಬರಬಹುದಾದಂತೆ, ತಯಾರಕನ ಹೆಸರು ಮತ್ತು ವಿಳಾಸಕ್ಕೆ ಸಂಬಂಧಿಸಿದಂತೆ, ಅಷ್ಟೇ ಅಲ್ಲದೆ ತಯಾರಿಸಿದ ದಿನಾಂಕ/ ಪ್ಯಾಕ್ ಮಾಡಿದ ತಿಂಗಳು ಮತ್ತು ವರ್ಷ, ಗರಿಷ್ಠ ಚಿಲ್ಲರೆ ದರ ಹಾಗೂ ಗ್ರಾಹಕ ಸೇವಾ ದೂರವಾಣಿ ಸಂಖ್ಯೆ ಮತ್ತು ಘೋಷಿತ ಗಾತ್ರ ಹಾಗೂ ನಿರ್ದಿಷ್ಟ ಘಟಕಕ್ಕೆ ಸಂಬಂಧಿಸಿದಂತೆ ಘೋಷಣೆ ಮಾಡಿರುವುದಿಲ್ಲ. ಈ ಘೋಷಣೆಗಳನ್ನು ಮೊದಲೇ ಪ್ಯಾಕ್ ಮಾಡಿದ ಪ್ಯಾಕೇಜ್‌ಗಳ ಮೇಲೆ ಮಾಡಿರುವುದಿಲ್ಲ. ಆದುದರಿಂದ, ಕಾನೂನು

**ಮಾಪನ ಶಾಸ್ತ್ರ(ಪ್ಯಾಕ್ ಮಾಡಿದ ಪದಾರ್ಥಗಳ) ನಿಯಮಗಳು, 2001ರ ಮೇರೆಗೆ ಯಾವುವೇ ನಿಯಮಗಳನ್ನು ಉಲ್ಲಂಘಿಸಿದ್ದರೆ, ಆಗ, ಸದರಿ ನಿಯಮಗಳ ಉಲ್ಲಂಘನೆಯು, ಸದರಿ ನಿಯಮಗಳ 32ನೇ ನಿಯಮದ ಮೇರೆಗೆ ದಂಡನೀಯವಾದುದಾಗಿದೆ.**

**ಆದುದರಿಂದ, ಮೇಲೆ ಹೇಳಿದ ಸಂದರ್ಭಗಳ ಮೇರೆಗೆ, ಈ ಮೂಲಕ, ಮೇಲಿನ ಎಲ್ಲಾ ಮೊಕದ್ದಮೆಗಳಲ್ಲಿ, ಯಾವುವೇ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ, ಮೊಕದ್ದಮೆಯನ್ನು ಮುಂದುವರಿಸಲು ಮತ್ತು ಅವು ಸದರಿ ನಿಯಮಗಳ 32ನೇ ನಿಯಮದ ಮೇರೆಗೆ ದಂಡನೀಯವಾಗಿದ್ದರೆ, ತರುವಾಯದಲ್ಲಿ ಸದರಿ ಮೊಕದ್ದಮೆಗಳನ್ನು ಕಾನೂನಿಗನುಸಾರವಾಗಿ ವಿಲೆ ಮಾಡಲು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿದೆ.**

**ಅರ್ಜಿಗಳನ್ನು ಭಾಗಶಃ ಅಂಗೀಕರಿಸಲಾಗಿದೆ.**

ಅರ್ಜಿದಾರರ ಪರ : ಶ್ರೀ ನಟರಾಜ್ ಆರ್., ನ್ಯಾಯವಾದಿ.

ಪ್ರತ್ಯರ್ಜಿದಾರರ ಪರ : ಶ್ರೀ ಎಸ್. ರಾಚಯ್ಯ, ಉಚ್ಚ ನ್ಯಾಯಾಲಯದ ಸರ್ಕಾರಿ ನ್ಯಾಯವಾದಿ ಮತ್ತು ಶ್ರೀ ಸಂದೇಶ್ ಜೆ. ಚೌಟ, ವಿಶೇಷ ಸರ್ಕಾರಿ ವಕೀಲರು II.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ:**

ಮೇಲಿನ ಎಲ್ಲ ಮೊಕದ್ದಮೆಗಳಲ್ಲಿ, ಪ್ರತಿವಾದಿ–ಕಾನೂನು ಮಾಪನ ನಿರೀಕ್ಷಕರು (ಇನ್‌ಸ್ಪೆಕ್ಟರ್), ಮಂಗಳೂರು ಉಪ–ವಿಭಾಗ, ಮಂಗಳೂರು ಇವರು, ಕಾನೂನು ಮಾಪನ ಶಾಸ್ತ್ರ ಅಧಿನಿಯಮ, 2009ರ (ಇದರಲ್ಲಿ ಇನ್ನು ಮುಂದೆ

ಸಂಕ್ಷಿಪ್ತವಾಗಿ 'ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ) 18(1), 31, 36(1)ನೇ ಪ್ರಕರಣಗಳ ಅಡಿಯಲ್ಲಿ ಹಾಗೂ ಕಾನೂನು ಮಾಪನಶಾಸ್ತ್ರ (ಪ್ಯಾಕ್ ಮಾಡಿದ ಪದಾರ್ಥಗಳು) ನಿಯಮಗಳು, 2011ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ನಿಯಮಗಳು' ಎಂದು ಉಲ್ಲೇಖಿಸಲಾಗಿದೆ) 11(1)(ಇ), 18, 6(1), (ಡಿ), (ಇ), (ಎಫ್) ಮತ್ತು 6(2) ನಿಯಮಗಳನ್ನು ಉಲ್ಲಂಘನೆ ಮಾಡಿದ್ದಕ್ಕಾಗಿ, ಅರ್ಜಿದಾರರ ವಿರುದ್ಧ ಆರೋಪಗಳನ್ನು ಹೊರಿಸಿ ಖಾಸಗಿ ದೂರುಗಳನ್ನು ಸಲ್ಲಿಸಿದ್ದಾರೆ. ಕೆಲವು ಪ್ರಕರಣಗಳಲ್ಲಿ, 4(1)(ಡಿ) ನಿಯಮವನ್ನು ಉಲ್ಲಂಘಿಸಲಾಗಿದೆ ಎಂದು ಹಾಗೂ ಇನ್ನು ಕೆಲವು ಪ್ರಕರಣಗಳಲ್ಲಿ 6(1)(ಎ), (ಡಿ), (ಇ) ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಲಾಗಿದೆ.

2. ಇದರಲ್ಲಿನ ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಕೆಲವು ಪ್ರಕರಣಗಳಲ್ಲಿ 6(1)ನೇ ನಿಯಮ, 4 ಮತ್ತು 6(3)ನೇ ನಿಯಮಗಳನ್ನು ಅನ್ವಯಿಸಿ, ಮೇಲೆ ಹೇಳಿದ ಕ್ರಿಮಿನಲ್ ದೂರುಗಳ ಮೂಲಕ ಪ್ರತಿವಾದಿಯು ನಿಯಮಗಳನ್ನು ಅನ್ವಯಿಸಿದಾಗ್ಯೂ, ಅಧಿನಿಯಮದ 18(1)ನೇ ಪ್ರಕರಣವನ್ನು ಅಥವಾ 36(1)ನೇ ಪ್ರಕರಣವನ್ನು ಅನ್ವಯಿಸುವಂತೆಯೇ ಇಲ್ಲ. ಕ್ರಿಮಿನಲ್ ಅರ್ಜಿ ಸಂಖ್ಯೆ. 8106/2013ರಲ್ಲಿ ಸಹ, 6(1) ನಿಯಮದ (ಎ)ಯಿಂದ (ಡಿ)ವರೆಗಿನ ಖಂಡಗಳು ಅನ್ವಯವಾಗುತ್ತವಾದರೂ, ಪುನಃ ಅಧಿನಿಯಮದ 18ನೇ, 31ನೇ ಮತ್ತು 36(1)ನೇ ಪ್ರಕರಣಗಳು ಅನ್ವಯವಾಗುವುದೇ ಇಲ್ಲ ಎಂದು ಪಟ್ಟುಬಿಡದೆ ವಾದಿಸಿದ್ದಾರೆ.

3. ಮೊದಲೇ ಪ್ಯಾಕ್ ಮಾಡಿದ ಪ್ಯಾಕೇಜ್‌ಗಳ ಮೇಲೆ ನಮೂದಿಸಬೇಕಾದ ಕೆಲವು ಮಾಹಿತಿಯ ಸಂಬಂಧದಲ್ಲಿ ಯಾವುದೇ ಘೋಷಣೆ ಮಾಡಿರುವುದಿಲ್ಲ ಮತ್ತು ಅಂಥ ನಿಯಮಗಳ ಉಲ್ಲಂಘನೆಯು 32ನೇ ನಿಯಮದ ಅಡಿಯಲ್ಲಿ ಮಾತ್ರ ದಂಡನೀಯವಾದುದಾಗಿದೆ ಎಂದು ಅರ್ಜಿದಾರರು ವಾದಿಸಿದ್ದಾರೆ. ಆದುದರಿಂದ, ಅಧಿನಿಯಮದ 18(1)ನೇ, 36(1)ನೇ ನಿಯಮಗಳ ಮತ್ತು ಅಧಿನಿಯಮದ

31ನೇ ಪ್ರಕರಣದ ಮೇರೆಗಿನ ಅಪರಾಧದ ಸಂಬಂಧದಲ್ಲಿನ ವ್ಯವಹರಣೆಗಳನ್ನು ರದ್ದುಗೊಳಿಸಲು ಕೋರಿರುತ್ತಾರೆ.

4. ಮೇಲೆ ಹೇಳಿದ ಸದರಿ ಉಪಬಂಧಗಳನ್ನು ಪ್ರಸ್ತಾಪಿಸುವ ಮುಂಚೆ, ಮೇಲೆ ಹೇಳಿದ ಮೊಕದ್ದಮೆಗಳ ಸಂಕ್ಷಿಪ್ತ ವಾಸ್ತವ ಸಂಗತಿಗಳನ್ನು ಕುರಿತು ಚರ್ಚಿಸುವುದು ಸೂಕ್ತವಾಗಿದೆ ಮತ್ತು ಅಗತ್ಯವಾಗಿದೆ.

5. ದೂರುದಾರರಾದ (ಇದರಲ್ಲಿನ ಪ್ರತಿವಾದಿಯು) ಕಾನೂನು ಮಾಪನಶಾಸ್ತ್ರ ನಿರೀಕ್ಷಕ, ಮಂಗಳೂರು ಇವರು, ವಾಸ್ತವದಲ್ಲಿ, ದಿನಾಂಕ: 21.11.2012ರಂದು, ಸಂಜೆ 4 ಗಂಟೆಗೆ ಅರ್ಜಿದಾರರ ಚಿಲ್ಲರೆ ಅಂಗಡಿಗಳಿಗೆ ಭೇಟಿ ನೀಡಿದಾಗ, ಅವರಿಗೆ ಅಲ್ಲಿ ಅಕ್ರಮ ವ್ಯವಹಾರಗಳು ಕಂಡುಬಂದವು. ಅವರ ಅಭಿಪ್ರಾಯದಲ್ಲಿ, ಮೊದಲೇ ಪ್ಯಾಕ್ ಮಾಡಿದ ಕೆಲವು ಪ್ಯಾಕೇಜ್‌ಗಳು ಅವರಿಗೆ ಕಂಡುಬಂದಿದ್ದು, ಸದರಿ ಮೊದಲೇ ಪ್ಯಾಕ್ ಮಾಡಿದ ಪ್ಯಾಕೇಜ್‌ಗಳ ಮೇಲೆ, ತಯಾರಕರ ವಿಳಾಸ, ತಯಾರಿಸಿದ ದಿನಾಂಕ/ ಪ್ಯಾಕ್ ಮಾಡಿದ ತಿಂಗಳು ಮತ್ತು ವರ್ಷ, ಗರಿಷ್ಠ ಚಿಲ್ಲರೆ ದರ, ಗ್ರಾಹಕ ಕರೆ ಸಂಖ್ಯೆ ಮತ್ತು ಘೋಷಿತ ಗಾತ್ರ ಅಥವಾ ಘೋಷಿತ ಗುಣಮಟ್ಟ ಇವು ಮುದ್ರಣಗೊಂಡಿಲ್ಲದೆ ಇರುವುದು ಕಂಡುಬಂದಿತು. ಇದಲ್ಲದೆ, ಮೊದಲೇ ಪ್ಯಾಕ್ ಮಾಡಿದ ಪ್ಯಾಕೇಜ್‌ಗಳಾದ ಸದರಿ ಉತ್ಪನ್ನಗಳಿಗೆ ಸಂಬಂಧಿಸಿದ ದರಪಟ್ಟಿಗಳನ್ನು ಹಾಜರುಪಡಿಸುವಂತೆ ಪ್ರತಿವಾದಿಯು ಅರ್ಜಿದಾರರನ್ನು ಕೇಳಿದರಾದರೂ, ಅವರು ಅಂಥ ಯಾವುವೇ ದಸ್ತಾವೇಜುಗಳನ್ನು ಹಾಜರುಪಡಿಸಲಿಲ್ಲವೆಂದು ದೂರುಗಳಲ್ಲಿ ಅವರು ವಾದಿಸಿದ್ದಾರೆ; ಆದ್ದರಿಂದ, ಇತರ ಅಪರಾಧಗಳ ಜೊತೆಗೆ ಅಧಿನಿಯಮದ 31ನೇ ಪ್ರಕರಣದ ಮೇರೆಗಿನ ಅಪರಾಧ ಘಟಿಸಿದೆ ಎಂದು ಆರೋಪಿಸಿ, ದೂರನ್ನು ಸಲ್ಲಿಸಿದ್ದಾರೆ. ಸುಲಭವಾಗಿ ಅರ್ಥ ಮಾಡಿಕೊಳ್ಳುವ ಮತ್ತು ಗೊಂದಲವನ್ನು ತಪ್ಪಿಸುವ ಉದ್ದೇಶಕ್ಕಾಗಿ, ಯಾವ ಮೊಕದ್ದಮೆಯಲ್ಲಿ ಪ್ರತಿವಾದಿಯು, ಆರೋಪಿಸಲಾದ ಅಪರಾಧಗಳ ಯಾವ ಉಪಬಂಧಗಳನ್ನು ಅನ್ವಯಿಸಿರುವರು ಎಂಬುದನ್ನು ತೋರಿಸುವ ಸಲುವಾಗಿ ಒಂದು ನಕ್ಷೆ (ಚಾರ್ಟ್)ಯನ್ನು ಸಿದ್ಧಪಡಿಸಿದ್ದಾರೆ. ಅದು ಈ ಮುಂದಿನಂತಿದೆ:–

| ಕ್ರಮ ಸಂಖ್ಯೆ | ಮೊಕದ್ದಮೆ ಸಂಖ್ಯೆ | ಹೊರಿಸಿದ ಆರೋಪ | ಪುಟ ಸಂಖ್ಯೆ ಕಂಡಿಕೆ ಸಂಖ್ಯೆ | ಆರೋಪಿಸಿದ ಅಪರಾಧ ಸಂಬಂಧಿ ಉಪಬಂಧಗಳು |
|---|---|---|---|---|
| 1. | ಸಿಆರ್‌ಎಲ್.ಪಿ 5357/2013 | ತಯಾರಿಸಿದ ದಿನಾಂಕ/ ಪ್ಯಾಕ್ ಮಾಡಿದ ತಿಂಗಳು ಮತ್ತು ವರ್ಷವನ್ನು ಪ್ಯಾಕೇಜ್ ಮೇಲೆ ಘೋಷಿಸಿರುವುದಿಲ್ಲ | ಪುಟ ಸಂ. 13 ಕಂಡಿಕೆ ಸಂ. 6 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ನಿಯಮಗಳ 4, 6(1)(ಡಿ), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |
| 2. | ಸಿಆರ್‌ಎಲ್.ಪಿ 5358/2013 | ತಯಾರಿಸಿದ ದಿನಾಂಕ/ ಪ್ಯಾಕ್ ಮಾಡಿದ ತಿಂಗಳು ಮತ್ತು ವರ್ಷವನ್ನು ಹೆಚ್ಚುವರಿ ಸ್ಟಿಕರ್ ಮೇಲೆ ಘೋಷಿಸಿರುವುದಿಲ್ಲ | ಪುಟ ಸಂ. 11 ಕಂಡಿಕೆ ಸಂ. 3 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ನಿಯಮಗಳ 4, 6(3), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |
| 3. | ಸಿಆರ್‌ಎಲ್.ಪಿ 5359/2013 | ಹೆಚ್ಚುವರಿ ಸ್ಟಿಕರ್ ಮೇಲೆ ಗರಿಷ್ಠ ಮಾರಾಟ ದರ ಘೋಷಿಸಿರುವುದು ಮತ್ತು ಪ್ಯಾಕೇಜ್ ಮೇಲೆ ತಯಾರಕನ ಹೆಸರು ಮತ್ತು ಗ್ರಾಹಕ ಸೇವಾ ಸಂಖ್ಯೆಯನ್ನು ಘೋಷಿಸಿರುವುದಿಲ್ಲ | ಪು.ಸಂ. 11 ಕಂಡಿಕೆ ಸಂ. 3 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ಕಾನೂನು ಮಾಪನ ಶಾಸ್ತ್ರ(ಪ್ಯಾಕ್ ಮಾಡಿದ ಪದಾರ್ಥಗಳು) ನಿಯಮಗಳ ('ನಿಯಮ') 4, 6(2), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |
| 4. | ಸಿಆರ್‌ಎಲ್.ಪಿ 5360/2013 | ಹೆಚ್ಚುವರಿ ಸ್ಟಿಕರ್ ಮೇಲೆ ಗರಿಷ್ಠ ಮಾರಾಟ ದರ ಘೋಷಿಸಿರುವುದು | ಪುಟ ಸಂ. 9 ಕಂಡಿಕೆ ಸಂ. 6 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ನಿಯಮಗಳ 4, 6(3), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |
| 5. | ಸಿಆರ್‌ಎಲ್.ಪಿ 5393/2013 | ಹೆಚ್ಚುವರಿ ಸ್ಟಿಕರ್ ಮೇಲೆ ಗರಿಷ್ಠ ಮಾರಾಟ ದರ ಘೋಷಿಸಿರುವುದು | ಪುಟ ಸಂ. 10 ಕಂಡಿಕೆ ಸಂ. 6 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ನಿಯಮಗಳ 4, 6(1), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |

| | | | | |
|---|---|---|---|---|
| 6 | ಸಿಆರ್‌ಎಲ್.ಪಿ 5394/2013 | ಹೆಚ್ಚುವರಿ ಸ್ಟಿಕರ್ ಮೇಲೆ ಗರಿಷ್ಠ ಮಾರಾಟ ದರ ಘೋಷಿಸಿರುವುದು | ಪುಟ ಸಂ. 13 ಕಂಡಿಕೆ ಸಂ. 6 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ನಿಯಮಗಳ 4, 6(3), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |
| 7 | ಸಿಆರ್‌ಎಲ್.ಪಿ 5395/2013 | ತಯಾರಕರ ಪೂರ್ಣ ವಿಳಾಸವನ್ನು ಪ್ಯಾಕೇಜ್ ಮೇಲೆ ಘೋಷಿಸಿರುವುದಿಲ್ಲ | ಪುಟ ಸಂ. 10 ಕಂಡಿಕೆ ಸಂ. 6 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ನಿಯಮಗಳ 4, 6(1)(ಎ), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |
| 8 | ಸಿಆರ್‌ಎಲ್.ಪಿ 5396/2013 | ತಯಾರಕರ ಪೂರ್ಣ ವಿಳಾಸವನ್ನು ಪ್ಯಾಕೇಜ್ ಮೇಲೆ ಘೋಷಿಸಿರುವುದಿಲ್ಲ | ಪುಟ ಸಂ. 11 ಕಂಡಿಕೆ ಸಂ. 3 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ನಿಯಮಗಳ 4, 6(1)(ಎ), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |
| 9 | ಸಿಆರ್‌ಎಲ್.ಪಿ 5397/2013 | ಹೆಚ್ಚುವರಿ ಸ್ಟಿಕರ್ ಮೇಲೆ ಗರಿಷ್ಠ ಮಾರಾಟ ದರ ಘೋಷಿಸಿರುವುದು | ಪುಟ ಸಂ. 10 ಕಂಡಿಕೆ ಸಂ. 6 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ನಿಯಮಗಳ 4, 6(3), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |
| 10 | ಸಿಆರ್‌ಎಲ್.ಪಿ 5398/2013 | ಹೆಚ್ಚುವರಿ ಸ್ಟಿಕರ್ ಮೇಲೆ ಗರಿಷ್ಠ ಮಾರಾಟ ದರ ಘೋಷಿಸಿರುವುದು | ಪುಟ ಸಂ. 10 ಕಂಡಿಕೆ ಸಂ. 6 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ನಿಯಮಗಳ 4, 6(3), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |
| 11 | ಸಿಆರ್‌ಎಲ್.ಪಿ 5399/2013 | ಹೆಚ್ಚುವರಿ ಸ್ಟಿಕರ್ ಮೇಲೆ ಗರಿಷ್ಠ ಮಾರಾಟ ದರ ಘೋಷಿಸಿರುವುದು | ಪುಟ ಸಂ. 10 ಕಂಡಿಕೆ ಸಂ. 6 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ನಿಯಮಗಳ 4, 6(1) (ಇ), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |
| 12 | ಸಿಆರ್‌ಎಲ್.ಪಿ 5400/2013 | ಹೆಚ್ಚುವರಿ ಸ್ಟಿಕರ್ ಮೇಲೆ ಗರಿಷ್ಠ ಮಾರಾಟ ದರ ಘೋಷಿಸಿರುವುದು | ಪುಟ ಸಂ. 10 ಕಂಡಿಕೆ ಸಂ. 6 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ನಿಯಮಗಳ 4, 6(3), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |

| | | | | |
|---|---|---|---|---|
| 13 | ಸಿಆರ್‌ಎಲ್.ಪಿ 5401/2013 | ಹೆಚ್ಚುವರಿ ಸ್ಟಿಕರ್ ಮೇಲೆ ಗರಿಷ್ಠ ಮಾರಾಟ ದರ ಘೋಷಿಸಿರುವುದು | ಪುಟ ಸಂ. 8 ಕಂಡಿಕೆ ಸಂ. 6 | ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗಿರುವವೆಂದು ಆರೋಪಿಸುವ ನಿಯಮಗಳ 4, 6(3), 18(1)ನೇ ನಿಯಮಗಳೊಂದಿಗೆ ಓದಲಾಗುವ ಅಧಿನಿಯಮದ 18(1)ನೇ ಪ್ರಕರಣ |

6. ಎಲ್ಲಾ ಮೊಕದ್ದಮೆಗಳಲ್ಲಿ ಮಾಡಿದ ಆರೋಪಗಳ ಸೂಕ್ಷ್ಮ ಅವಲೋಕನದ ನಂತರ, ಅರ್ಜಿದಾರರು ಮೊದಲೇ ಪ್ಯಾಕ್ ಮಾಡಿದ ಪ್ಯಾಕೇಜ್‌ಗಳ ಮೇಲೆ ವಿಳಾಸ, ತಯಾರಿಸಿದ/ ಪ್ಯಾಕ್ ಮಾಡಿದ ದಿನಾಂಕ, ತಿಂಗಳು ಅಥವಾ ವರ್ಷ, ಗರಿಷ್ಠ ಮಾರಾಟ ದರ, ಗ್ರಾಹಕ ಕರೆ ಸಂಖ್ಯೆ, ಘೋಷಿತ ಗಾತ್ರ ಮತ್ತು ಘೋಷಿತ ನಿರ್ದಿಷ್ಟ ಘಟಕ ಇವುಗಳನ್ನು ಪ್ರದರ್ಶಿಸಿಲ್ಲವೆಂಬುದು ಮುಖ್ಯ ಆಪಾದನೆಗಳಾಗಿವೆ ಎಂದು ಕಂಡುಬರುತ್ತದೆ. ಆ ಪರಿಣಾಮಕ್ಕೆ, ಯಾವುದೊಂದು ಆರೋಪವಿರಲಿಲ್ಲ ಎಂಬುದನ್ನು ಹೊರತುಪಡಿಸಿದರೆ, ಮೊದಲೇ ಪ್ಯಾಕ್ ಮಾಡಿದ ಪ್ಯಾಕೇಜ್‌ಗಳನ್ನು ತೆರೆದಾಗ, ಪ್ಯಾಕ್ ಮಾಡಿದ ವಸ್ತುಗಳ ತೂಕ, ಸಂಖ್ಯೆ ಮತ್ತು ನಿರ್ದಿಷ್ಟ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯಾವುವೇ ವ್ಯತ್ಯಾಸಗಳಿರಲಿಲ್ಲ. ಆದುದರಿಂದ, ಅಧಿನಿಯಮದ 18(1)ನೇ ಪ್ರಕರಣವಾಗಲಿ ಅಥವಾ 36(1)ನೇ ಪ್ರಕರಣವಾಗಲಿ ಅನ್ವಯವಾಗುವುದಿಲ್ಲವೆಂದು ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ. ಈ ಹಿನ್ನಲೆಯಲ್ಲಿ, ಅಧಿನಿಯಮದ 36ನೇ ಪ್ರಕರಣವನ್ನು ಅನ್ವಯಿಸುವಂಥ ರೀತಿಯಲ್ಲಿ 18ನೇ ಪ್ರಕರಣದ ಮೇರೆಗೆ ಅಪರಾಧವನ್ನು ಎಸಗಲಾಗಿದೆಯೇ ಎಂಬುದನ್ನು ನ್ಯಾಯಾಲಯವು ಪರಿಶೀಲಿಸಬೇಕಿದೆ. ಕಾನೂನು ಮಾಪನ ಶಾಸ್ತ್ರಅಧಿನಿಯಮದ 18ನೇ ಪ್ರಕರಣವು ಈ ಮುಂದಿನಂತಿದೆ:

**"ಪ್ರಕರಣ 18. ಮೊದಲೇ ಪ್ಯಾಕ್ ಮಾಡಿದ ಸರಕುಗಳನ್ನು ಕುರಿತ ಘೋಷಣೆಗಳು:**

(1) ಯಾರೇ ವ್ಯಕ್ತಿಯು, ಯಾವುದೇ ಮೊದಲೇ ಪ್ಯಾಕ್ ಆದ ಸರಕನ್ನು, **ನಿಯಮಿಸಬಹುದಾದಂಥ ನಿರ್ದಿಷ್ಟ ಗುಣಮಟ್ಟಗಳಲ್ಲಿ ಅಥವಾ**

> **ಸಂಖ್ಯೆಯಲ್ಲಿ ಮತ್ತು ಅದರ ಮೇಲೆ ಅಂಥ ಘೋಷಣೆಗಳನ್ನು ಮತ್ತು ವಿವರಗಳನ್ನು ಹೊಂದಿದ ಹೊರತು,** ಅಂಥ ಸರಕನ್ನು ತಯಾರಿಸುವುದನ್ನು, ಪ್ಯಾಕ್ ಮಾಡುವುದನ್ನು, ಆಮದು ಮಾಡಿಕೊಳ್ಳುವುದನ್ನು, ವಿತರಿಸುವುದನ್ನು, ರವಾನಿಸುವುದನ್ನು, ನೀಡುವುದನ್ನು, ಪ್ರದರ್ಶಿಸುವುದನ್ನು ಅಥವಾ ಸ್ವಾಧೀನ ಹೊಂದುವುದನ್ನು ಮಾಡತಕ್ಕದ್ದಲ್ಲ.
>
> (2) ಮೊದಲೇ ಪ್ಯಾಕ್ ಆದ ಸರಕಿನ ಚಿಲ್ಲರೆ ಮಾರಾಟ ದರವನ್ನು ಉಲ್ಲೇಖಿಸುವ **ಯಾವುದೇ ಜಾಹೀರಾತು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ, ಪ್ಯಾಕೇಜಿನಲ್ಲಿರುವ ಸರಕಿನ ಪ್ರಮಾಣ ಅಥವಾ ಸಂಖ್ಯೆಗೆ** ಸಂಬಂಧಿಸಿದಂತೆ ಘೋಷಣೆಯನ್ನು ಒಳಗೊಂಡಿರತಕ್ಕದ್ದು."

7. ಆದುದರಿಂದ, 18(1)ನೇ ಪ್ರಕರಣವನ್ನು ಸೂಕ್ತವಾಗಿ ಅರ್ಥ ಮಾಡಿಕೊಂಡರೆ, ಮೊದಲೇ ಪ್ಯಾಕ್ ಮಾಡಿದ ಸರಕುಗಳ ಮೇಲೆ ಘೋಷಣೆ ಇರುವುದು ಕಡ್ಡಾಯವಾಗಿರುತ್ತದೆ. ತರುವಾಯದಲ್ಲಿ, ತೂಕ, ನಿರ್ದಿಷ್ಟ ಪ್ರಮಾಣ ಮತ್ತು ಗುಣಮಟ್ಟ ಹಾಗೂ ಸಂಖ್ಯೆಗೆ ಸಂಬಂಧಿಸಿದಂತೆ, ಪ್ಯಾಕೇಜ್‌ನ ಒಳಗೆ ಕೆಲವು ವ್ಯತ್ಯಾಸಗಳಿದ್ದ ಹೊರತು, ಅಂಥ ನಿರ್ದಿಷ್ಟ ಪ್ರಮಾಣ ಅಥವಾ ಸಂಖ್ಯೆಯು, ಮೊದಲೇ ಪ್ಯಾಕ್ ಮಾಡಿದ ಸರಕಿನ ಒಳಗೆ ಇರತಕ್ಕದ್ದು. 18(1)ನೇ ಪ್ರಕರಣವು ಉಲ್ಲಂಘನೆಯಾದರೆ ಮಾತ್ರ 36(1)ನೇ ಪ್ರಕರಣವು ಅನ್ವಯವಾಗುತ್ತದೆ. 36(1)ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

> **"ಪ್ರಕರಣ 36. ನಿರ್ದಿಷ್ಟಪಡಿಸದ ಪ್ಯಾಕೇಜ್‌ಗಳ ಮಾರಾಟ, ಇತ್ಯಾದಿಗಾಗಿ ದಂಡ:–**
>
> **(1) ಈ ಅಧಿನಿಯಮದಲ್ಲಿ ಉಪಬಂಧಿಸಲಾದಂತೆ, ಪ್ಯಾಕೇಜ್ ಮೇಲಿನ ಘೋಷಣೆಗಳಿಗೆ ಅನುರೂಪವಾಗಿರದ ಯಾವುದೇ** ಮೊದಲೇ

ಪ್ಯಾಕ್ ಆದ ಪದಾರ್ಥದ ಮಾರಾಟಕ್ಕಾಗಿ ಅದನ್ನು ತಯಾರಿಸುವ, ಪ್ಯಾಕ್ ಮಾಡುವ, ಆಮದು ಮಾಡಿಕೊಳ್ಳುವ, ಮಾರಾಟ ಮಾಡುವ, ವಿತರಿಸುವ, ರವಾನಿಸುವ ಅಥವಾ ಅನ್ಯಥಾ ಮಾರಾಟಕ್ಕಾಗಿ ವರ್ಗಾಯಿಸುವ, ನೀಡುವ, ಪ್ರದರ್ಶಿಸುವ ಅಥವಾ ಮಾರಾಟ ಮಾಡುವಂತೆ, ವಿತರಿಸುವಂತೆ, ರವಾನಿಸುವಂತೆ ಮಾಡುವ ಅಥವಾ ಅನ್ಯಥಾ ಮಾರಾಟಕ್ಕಾಗಿ ವರ್ಗಾಯಿಸಿದ, ನೀಡಿದ, ಪ್ರದರ್ಶಿಸಿದ ಯಾರೇ ಆಗಲಿ, ಐವತ್ತು ಸಾವಿರ ರೂಪಾಯಿಗಳಿಗೆ ಮೀರಬಹುದಾಗಿರುವ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ತರುವಾಯದ ಅಪರಾಧಕ್ಕಾಗಿ, ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರದ ಆದರೆ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ ಅಥವಾ ಒಂದು ವರ್ಷಗಳವರೆಗೆ ವಿಸ್ತರಿಸಬಹುದಾಗಿರುವ ಅವಧಿಗಾಗಿನ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) **ನಿಯಮಿಸಬಹುದಾದ ನಿವ್ವಳ ಪ್ರಮಾಣದಲ್ಲಿನ ತಪ್ಪಿನೊಂದಿಗೆ,** ಮೊದಲೇ ಪ್ಯಾಕ್ ಆದ ಯಾವುದೇ ಪದಾರ್ಥವನ್ನು ತಯಾರಿಸುವ ಅಥವಾ ಪ್ಯಾಕ್ ಮಾಡುವ ಅಥವಾ ಆಮದು ಮಾಡಿಕೊಳ್ಳುವ ಅಥವಾ ತಯಾರಿಸುವಂತೆ ಅಥವಾ ಪ್ಯಾಕ್ ಮಾಡುವಂತೆ ಅಥವಾ ಆಮದು ಮಾಡಿಕೊಳ್ಳುವಂತೆ ಮಾಡುವ ಯಾರೇ ಆಗಲಿ, ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರದ, ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ ಮತ್ತು ಎರಡನೇ ಮತ್ತು ತರುವಾಯದ ಅಪರಾಧಕ್ಕಾಗಿ, ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ ಅಥವಾ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಅವೆರಡರಿಂದಲೂ **ದಂಡಿತನಾಗತಕ್ಕದ್ದು**.

(ಒತ್ತು ನೀಡಲಾಗಿದೆ)

8. ಈ ಉಪಬಂಧವನ್ನು ಅರ್ಥಪೂರ್ಣವಾಗಿ ತಿಳಿದುಕೊಂಡ ನಂತರ, ಸದರಿ ಮೊದಲೇ ಪ್ಯಾಕ್ ಮಾಡಿದ ಪ್ಯಾಕೇಜ್‌ಗಳ ಒಳಗಿರುವ ವಸ್ತುಗಳಿಗೆ ಸಂಬಂಧಿಸಿದಂತೆ ಪದಾರ್ಥವನ್ನು ಪ್ಯಾಕ್ ಮಾಡುವ ವ್ಯಕ್ತಿಗಳ ಮೇಲೆ ಹೊಣೆಗಾರಿಕೆ ಇದೆ ಎಂಬುದು ಸ್ಪಷ್ಟವಾಗುತ್ತದೆ. ಸದರಿ ಪ್ಯಾಕೇಜ್ ಒಳಗಿನ ಪದಾರ್ಥವು, ಪ್ಯಾಕೇಜ್ ಮೇಲಿನ ಘೋಷಣೆಗೆ ಅನುರೂಪವಾಗಿರದಿದ್ದರೆ, ಅಧಿನಿಯಮದಲ್ಲಿ ಉಪಬಂಧಿಸಲಾದಂತೆ, ಆತನು ಜುಲ್ಮಾನೆ, ಇತ್ಯಾದಿಯಿಂದ ದಂಡಿತನಾಗತಕ್ಕದ್ದು. ಆದುದರಿಂದ, 18ನೇ ಪ್ರಕರಣದ ಮೇರೆಗೆ, ಪ್ಯಾಕ್ ಮಾಡಿದ ಪದಾರ್ಥವು ಪ್ಯಾಕೇಜ್‌ಗಳ ಮೇಲೆ ಮಾಡಿದ ಘೋಷಣೆಗೆ ಅನುರೂಪವಾಗಿರಬೇಕು ಮತ್ತು ಯಾವುದೇ ವ್ಯತ್ಯಾಸವಿದ್ದರೆ, ಆಗ ಮಾತ್ರ 36ನೇ ಪ್ರಕರಣವು ಅನ್ವಯವಾಗುತ್ತಿದ್ದು, ಅದರ ಪ್ರಕಾರ ಅಧಿನಿಯಮದ 36(1)ನೇ ಪ್ರಕರಣದ ಮೇರೆಗೆ ದಂಡನೀಯವಾಗಿರತಕ್ಕದ್ದು. ಆದುದರಿಂದ, ನಿಯಮಗಳಿಗನುಸಾರವಾಗಿ ಮೊದಲೇ ಪ್ಯಾಕ್ ಆದ ಪ್ಯಾಕೇಜ್‌ಗಳ ಮೇಲೆ, ತಯಾರಕನ ಹೆಸರು, ವಿಳಾಸ, ತಯಾರಿಸಿದ ದಿನಾಂಕ, ಪ್ಯಾಕ್ ಮಾಡಿದ ತಿಂಗಳು ಮತ್ತು ವರ್ಷ, ಗರಿಷ್ಠ ಚಿಲ್ಲರೆ ದರ ಹಾಗೂ ಗ್ರಾಹಕ ಕರೆ ದೂರವಾಣಿ ಸಂಖ್ಯೆಗೆ ಸಂಬಂಧಿಸಿದಂತೆ ಮತ್ತು ಪದಾರ್ಥದ ನಿರ್ದಿಷ್ಟ ಗುಣಮಟ್ಟ ಹಾಗೂ ಪ್ಯಾಕೇಜ್ ಒಳಗಿರುವ ವಸ್ತುಗಳ ಸಂಖ್ಯೆಯ ಬಗ್ಗೆ ಮೊದಲು ಘೋಷಣೆ ಇರಬೇಕು ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. ಹಾಗಾಗಿ, ಘೋಷಣೆ ಮಾಡಿದ್ದಕ್ಕೆ ವಿರುದ್ಧವಾಗಿ ಪ್ಯಾಕೇಜ್ ಒಳಗಿನ ತೂಕ, ನಿರ್ದಿಷ್ಟ ಗುಣಮಟ್ಟ ಮತ್ತು ಪ್ರಮಾಣ ಹಾಗೂ ಸಂಖ್ಯೆಗೆ ಸಂಬಂಧಿಸಿದಂತೆ ಯಾವುದೇ ಉಲ್ಲಂಘನೆಯಾದರೆ, ಆಗ ಮಾತ್ರ 18(1)ನೇ ಪ್ರಕರಣವು ಅನ್ವಯವಾಗುತ್ತದೆ, ಅದು ಅಧಿನಿಯಮದ 36(1)ನೇ ಪ್ರಕರಣದ ಮೇರೆಗೆ ದಂಡನೀಯವಾಗಿರುತ್ತದೆ.

9. ಮೇಲೆ ಹೇಳಿದ ಎರಡು ಉಪಬಂಧಗಳನ್ನು ಅರ್ಥ ಮಾಡಿಕೊಳ್ಳುವ ಸಲುವಾಗಿ, ಕೆಲವು ಉದಾಹರಣೆಗಳನ್ನು ನೀಡುವುದು ಸೂಕ್ತವಾದುದು ಮತ್ತು ಅಗತ್ಯವೂ ಆಗಿದೆ:

(i) ಉದಾಹರಣೆ – ತಯಾರಕನ ವಿಳಾಸ, ತಯಾರಿಸಿದ ದಿನಾಂಕ/ ಪ್ಯಾಕ್ ಮಾಡಿದ ತಿಂಗಳು ಮತ್ತು ವರ್ಷ, ಗರಿಷ್ಠ ಮಾರಾಟ ದರ ಮತ್ತು ಗ್ರಾಹಕ ಕರೆ ದೂರವಾಣಿ ಸಂಖ್ಯೆ ಇವುಗಳನ್ನು ವಿವರಿಸಿ ಘೋಷಣೆಯನ್ನು ಮಾಡಿದ್ದರೆ ಮಾತ್ರ ಹಾಗೂ ಗಾತ್ರ ಮತ್ತು ನಿರ್ದಿಷ್ಟ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಘೋಷಣೆಯನ್ನು ಸಹ ಮಾಡಲಾಗಿದ್ದು, ಆದರೆ, ಘೋಷಣೆಯನ್ನು ಯುಕ್ತವಾಗಿ ಮಾಡಿದಾಗ್ಯೂ, ಗಾತ್ರ, ತೂಕ, ಸಂಖ್ಯೆ ಮತ್ತು ನಿರ್ದಿಷ್ಟ ಗುಣಮಟ್ಟಕ್ಕೆ ಸಂಬಂಧಿಸಿದಂತೆ ವ್ಯತ್ಯಾಸವಿದ್ದರೆ, ಆಗ, ನಿಯಮದ ಉಲ್ಲಂಘನೆಯಷ್ಟೇ ಅಲ್ಲದೆ, 18(1)ನೇ ಪ್ರಕರಣದ ಉಲ್ಲಂಘನೆ ಸಹ ಆಗುತ್ತದೆ.

(ii) ಉದಾಹರಣೆ – ವಿವರಗಳನ್ನು ನಮೂದಿಸದೆ ಘೋಷಣೆಯನ್ನು ಮಾಡಿದ್ದರೆ/ ಅಥವಾ ತಯಾರಕನ ವಿಳಾಸ, ತಯಾರಿಸಿದ ದಿನಾಂಕ/ ಪ್ಯಾಕ್ ಮಾಡಿದ ತಿಂಗಳು ಮತ್ತು ವರ್ಷ, ಗರಿಷ್ಠ ಚಿಲ್ಲರೆ ದರ ಮತ್ತು ಗ್ರಾಹಕ ಕರೆ ದೂರವಾಣಿ ಸಂಖ್ಯೆ, ಘೋಷಿತ ಗಾತ್ರ, ಪ್ರಮಾಣ ಮತ್ತು ಗುಣಮಟ್ಟಕ್ಕೆ ಸಂಬಂಧಿಸಿದಂತೆ ಘೋಷಣೆಯನ್ನು ಮಾಡಿರದಿದ್ದರೆ, ಪ್ಯಾಕೇಜ್‌ನ್ನು ತೆರೆದಾಗ, ನಿರ್ದಿಷ್ಟ ಪ್ರಮಾಣ ಮತ್ತು ಸಂಖ್ಯೆಗೆ ಸಂಬಂಧಿಸಿದಂತೆ ಯಾವುದೇ ವ್ಯತ್ಯಾಸವಿದೆಯೆಂದು ಕಂಡುಬಂದರೆ, ಆಗ, 6ನೇ ನಿಯಮ ಮಾತ್ರವಲ್ಲದೆ, ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೆಯನ್ನು ಅಗತ್ಯಪಡಿಸುವ 18(1)ನೇ ಪ್ರಕರಣವನ್ನು ಸಹ ಉಲ್ಲಂಘಿಸಿದಂತಾಗುವುದು.

(iii) ಉದಾಹರಣೆ – ತಯಾರಕನ ವಿಳಾಸ, ತಯಾರಿಸಿದ ದಿನಾಂಕ/ ಪ್ಯಾಕ್ ಮಾಡಿದ ತಿಂಗಳು ಮತ್ತು ವರ್ಷ, ಗರಿಷ್ಠ ಮಾರಾಟ ದರ ಮತ್ತು ಗ್ರಾಹಕ ಕರೆ ದೂರವಾಣಿ ಸಂಖ್ಯೆಯನ್ನು ಹಾಗೂ ಘೋಷಿತ ಗಾತ್ರ, ಸಂಖ್ಯೆ ಮತ್ತು ಗುಣಮಟ್ಟವನ್ನು ನಮೂದಿಸಿ ಘೋಷಣೆಯನ್ನು ಮಾಡದೆ ಇದ್ದು, ಆದರೆ ಮೊದಲೇ ಪ್ಯಾಕ್ ಮಾಡಿದ ಪ್ಯಾಕೇಜ್‌ಗಳ ಒಳಗೆ ಇರಬೇಕಾಗಿರುವ ವಸ್ತುಗಳ ಪ್ರಮಾಣ, ಸಂಖ್ಯೆ, ಗಾತ್ರ, ತೂಕ ಮತ್ತು ಗುಣಮಟ್ಟ ನಿಖರವಾಗಿದೆ ಮತ್ತು ಸರಿಯಾಗಿದೆ ಎಂದು ಕಂಡುಬಂದರೆ, ಆಗ, ಮೇಲೆ ಹೇಳಿದ ಘೋಷಣೆಗಳಲ್ಲಿ ಯಾವುದೇ ಒಂದು

ಘೋಷಣೆಯನ್ನು ಪೂರ್ವ–ಸಂದಾಯಿತ ಪ್ಯಾಕೇಜ್‌ಗಳ ಮೇಲೆ ಘೋಷಣೆ ಮಾಡದೆ ಇದ್ದರೆ, ಆಗ ನಿಯಮಗಳ 6ನೇ ನಿಯಮ ಮಾತ್ರ ಅನ್ವಯವಾಗುತ್ತದೆ, ಆದರೆ ಅಧಿನಿಯಮದ 36(1)ನೇ ಪ್ರಕರಣದ ಅಡಿಯಲ್ಲಿ ದಂಡನೆಯನ್ನು ಅಗತ್ಯಪಡಿಸುವ 18(1)ನೇ ಪ್ರಕರಣದ ಉಲ್ಲಂಘನೆಯಾಗುವುದಿಲ್ಲ.

10. ಆದುದರಿಂದ, ತಯಾರಕರ ವಿಳಾಸ, ತಯಾರಕರ ದಿನಾಂಕ/ ಪ್ಯಾಕ್ ಮಾಡಿದ ತಿಂಗಳು ಮತ್ತು ವರ್ಷ, ಗರಿಷ್ಠ ಮಾರಾಟ ದರ, ಗ್ರಾಹಕ ಕರೆ ದೂರವಾಣಿ ಸಂಖ್ಯೆ ಮತ್ತು ಘೋಷಿತ ದಿನಾಂಕ ಮತ್ತು ಪ್ರಮಾಣ ಮತ್ತು ಸಂಖ್ಯೆಯನ್ನು ನಮೂದಿಸದೆ ಇರುವ 6ನೇ ನಿಯಮದ ಉಲ್ಲಂಘನೆಗೆ, ಮೊದಲೇ ಪ್ಯಾಕ್ ಮಾಡಿದ ಪ್ಯಾಕೇಜ್‌ಗಳನ್ನು ತೆರೆದಾಗ, ಪ್ಯಾಕೇಜ್ ಒಳಗಿರುವ ವಸ್ತುಗಳ ಪ್ರಮಾಣ, ಗುಣಮಟ್ಟ, ತೂಕ, ಗಾತ್ರ ಮತ್ತು ಸಂಖ್ಯೆಗೆ ಸಂಬಂಧಿಸಿದಂತೆ ಕಾನೂನು ಮಾಪನ ಅಧಿಕಾರಿಗೆ ಯಾವುದೇ ವ್ಯತ್ಯಾಸ ಕಂಡುಬಂದಿದೆ ಎಂದು ದೂರಿನಲ್ಲಿ ಆರೋಪವಿರಬೇಕು. ಅಂಥ ಆರೋಪಗಳು ಇಲ್ಲದೇ ಹೋದರೆ, 18(1)ನೇ ಪ್ರಕರಣವನ್ನು ಅನ್ವಯಿಸಲಾಗುವುದಿಲ್ಲ ಅಥವಾ 36(1)ನೇ ಪ್ರಕರಣವನ್ನು ಅನ್ವಯಿಸುವಂತೆ ಒತ್ತಾಯಿಸಲಾಗುವುದಿಲ್ಲ.

11. ಈಗ, ಮೇಲೆ ಹೇಳಿದ ಮೊಕದ್ದಮೆಗಳಿಗೆ ಬಂದರೆ, ಮೊಕದ್ದಮೆಯ ವಾಸ್ತವಿಕ ಸಂಗತಿಗಳನ್ನು ನಾನು ಈಗಾಗಲೇ ನಿರೂಪಿಸಿರುವಂತೆ, ಕ್ರಿಮಿನಲ್ ಅರ್ಜಿ ಸಂಖ್ಯೆ: 8106/2013ನ್ನು ಹೊರತುಪಡಿಸಿ, ಬಹುತೇಕ ಎಲ್ಲ ಮೊಕದ್ದಮೆಗಳಲ್ಲಿ, ಅರ್ಜಿದಾರರ ವಿರುದ್ಧ ಮಾಡಲಾದ ಆರೋಪಗಳೆಂದರೆ, ಅವರು ಮೊದಲೇ ಪ್ಯಾಕ್ ಮಾಡಿದ ಪ್ಯಾಕೇಜ್‌ಗಳ ಮೇಲೆ ಘೋಷಣೆಯನ್ನು, ತಯಾರಕರ ವಿಳಾಸ, ತಯಾರಿಸಿದ ದಿನಾಂಕ/ ಪ್ಯಾಕ್ ಮಾಡಿದ ತಿಂಗಳು ಮತ್ತು ವರ್ಷ ಹಾಗೂ ಗರಿಷ್ಠ ಮಾರಾಟ ದರ ಮತ್ತು ಗ್ರಾಹಕ ಸೇವಾ ದೂರವಾಣಿ ಸಂಖ್ಯೆ ಹಾಗೂ ಘೋಷಿತ ಗಾತ್ರ, ಗುಣಮಟ್ಟ, ಪ್ರಮಾಣಕ, ಘಟಕ ಇವುಗಳನ್ನು ಪ್ರದರ್ಶಿಸಿಲ್ಲ ಎಂಬುದಾಗಿದೆ. ಪ್ಯಾಕೇಜ್‌ಗಳ ಒಳಗೆ ಪ್ಯಾಕ್ ಮಾಡಿದ್ದ ವಸ್ತುಗಳ ಗಾತ್ರ,

ತೂಕ ಅಥವಾ ಪ್ರಮಾಣಕ, ಘಟಕ ಅಥವಾ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯಾವುವೇ ವ್ಯತ್ಯಾಸಗಳಿದ್ದವೇ ಎಂಬುದರ ಬಗ್ಗೆ ಮೇಲಿನ ಸದರಿ ಮೊಕದ್ದಮೆಗಳಲ್ಲಿ ಯಾವುದೇ ರೀತಿಯ ಆರೋಪಗಳಿರುವುದಿಲ್ಲ. ಆದುದರಿಂದ, 18(1)ನೇ ಪ್ರಕರಣವನ್ನು ಅನ್ವಯಿಸಲಾಗುವುದಿಲ್ಲ ಅಥವಾ 36(1)ನೇ ಪ್ರಕರಣವು ಪರಿಣಾಮಕಾರಿಯಾಗುವುದಿಲ್ಲ.

12. ಕ್ರಿಮಿನಲ್ ಅರ್ಜಿ ಸಂಖ್ಯೆ: 8106/2013ಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಅಧಿನಿಯಮದ 18(1)ನೇ ಪ್ರಕರಣ ಮತ್ತು 36(1)ನೇ ಪ್ರಕರಣಗಳನ್ನು ಅನ್ವಯಿಸುವುದಷ್ಟೇ ಅಲ್ಲದೆ, ಅಧಿನಿಯಮದ 31ನೇ ಪ್ರಕರಣವು ಸಹ ಅನ್ವಯವಾಗುತ್ತದೆ. ಅಧಿನಿಯಮದ 31ನೇ ಪ್ರಕರಣವು, ದಸ್ತಾವೇಜು ಇತ್ಯಾದಿಗಳನ್ನು ಹಾಜರುಪಡಿಸದೆ ಇರುವುದಕ್ಕಾಗಿ ವಿಧಿಸಲಾಗುವ ದಂಡನೆಗೆ ಸಂಬಂಧಪಡುತ್ತದೆ. ಸದರಿ ಉಪಬಂಧವು ಈ ಮುಂದಿನಂತಿದೆ:

> "31. **ದಸ್ತಾವೇಜುಗಳು, ಮುಂತಾದವುಗಳನ್ನು ಹಾಜರುಪಡಿಸದೆ ಇರುವುದಕ್ಕಾಗಿ ದಂಡ.–**
>
> ಈ ಅಧಿನಿಯಮ ಅಥವಾ ಅದರಡಿ ರಚಿಸಿದ ನಿಯಮಗಳ ಮೂಲಕ ಅಥವಾ ಅವುಗಳ ಮೇರೆಗೆ, ಯಾವುದೇ ದಾಖಲೆಯನ್ನು ನಿರ್ವಹಿಸಲು ಅಥವಾ ನೋಂದಾಯಿಸಲು ವರದಿಗಳನ್ನು ಸಲ್ಲಿಸಲು; ಅಥವಾ ನಿರ್ದೇಶಕರು ಅಥವಾ ರಿಜಿಸ್ಟ್ರಾರರು ಅಥವಾ ನಿಯಂತ್ರಕರು ಅಥವಾ ಯಾರೇ ಕಾನೂನು ಮಾಪನ ಅಧಿಕಾರಿಯು ಯಾವುದೇ **ತೂಕ ಅಥವಾ ಮಾಪನ ಅಥವಾ ಯಾವುದೇ ದಸ್ತಾವೇಜನ್ನು ಅಥವಾ ಅದಕ್ಕೆ ಸಂಬಂಧಿಸಿದ ಇತರ ದಾಖಲೆಯನ್ನು** ತಪಾಸಣೆ ಮಾಡುವುದಕ್ಕಾಗಿ ತನ್ನ ಮುಂದೆ ಹಾಜರುಪಡಿಸಲು ಅಗತ್ಯಪಡಿಸಿದಾಗ ಯಾರೇ ಆಗಲಿ, ಯಾವುದೇ ಸೂಕ್ತ ಕಾರಣವಿಲ್ಲದೆ, ಹಾಗೆ ಮಾಡಲು ತಪ್ಪಿದಲ್ಲಿ ಅಥವಾ ವಿಫಲನಾದಲ್ಲಿ, ಐದು ಸಾವಿರ

ರೂಪಾಯಿಗಳಿಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ ಮತ್ತು ಎರಡನೇ ಅಥವಾ ತರುವಾಯದ ಅಪರಾಧಕ್ಕಾಗಿ, ಒಂದು ವರ್ಷದವರೆಗೆ ವಿಸ್ತರಿಸಬಹುದಾಗಿರುವ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು."

13. ತಯಾರಕನಿಗೆ ಅಥವಾ ಚಿಲ್ಲರೆ ವ್ಯಾಪಾರಿಗೆ ಅಥವಾ ಮಾರಾಟಗಾರನಿಗೆ, ಯಾವುದೇ ತೂಕ ಅಥವಾ ಮಾಪನ ಅಥವಾ ಯಾವುದೇ ದಸ್ತಾವೇಜು, ರಿಜಿಸ್ಟರ್ ಅಥವಾ ಅದಕ್ಕೆ ಸಂಬಂಧಿಸಿದ ಇತರ ದಾಖಲೆಯನ್ನು ತಪಾಸಣೆಗಾಗಿ ತನ್ನ ಮುಂದೆ ಹಾಜರುಪಡಿಸಬೇಕೆಂದು, ನಿರ್ದೇಶಕರು ಅಥವಾ ನಿಯಂತ್ರಕರು ಅಥವಾ ಯಾರೇ ಕಾನೂನು ಮಾಪನ ಅಧಿಕಾರಿಯು ಅಗತ್ಯಪಡಿಸಿದಾಗ, ಯಾವುದೇ ಸೂಕ್ತ ಕಾರಣವಿಲ್ಲದೆ ಹಾಗೆ ಮಾಡಲು ತಪ್ಪಿದಲ್ಲಿ ಅಥವಾ ವಿಫಲನಾದಲ್ಲಿ, ಆಗ ಮೇಲೆ ಹೇಳಿದ ಉಪಬಂಧದ ಅಡಿಯಲ್ಲಿ ಆ ವ್ಯಕ್ತಿಯು ದಂಡನೀಯನಾಗುವನು. ಆದುದರಿಂದ, ತಯಾರಕನು ಅಥವಾ ಚಿಲ್ಲರೆ ವ್ಯಾಪಾರಿಯು ನಿರ್ವಹಿಸುವ ಯಾವುದೇ ದಾಖಲೆ ಅಥವಾ ರಿಜಿಸ್ಟರು ಅಥವಾ ವರದಿಗಳನ್ನು ಹಾಜರುಪಡಿಸದೆ ಇದ್ದರೆ, ಆಗ 31ನೇ ಪ್ರಕರಣವು ಅನ್ವಯವಾಗುತ್ತದೆ ಮತ್ತು ಯಾವುದೇ ತೂಕ ಅಥವಾ ಮಾಪನವನ್ನು ಅಥವಾ ತೂಕ ಮತ್ತು ಮಾಪನಕ್ಕೆ ಸಂಬಂಧಿಸಿದ ಯಾವುದೇ ದಸ್ತಾವೇಜು, ರಿಜಿಸ್ಟರ್ ಅಥವಾ ಇತರ ದಾಖಲೆಯನ್ನು ಹಾಜರುಪಡಿಸಲು ಕೇಳಿದಾಗ ಹಾಜರುಪಡಿಸದಿದ್ದರೆ, ಆಗ ಸಹ 31ನೇ ಪ್ರಕರಣವು ಅನ್ವಯವಾಗುತ್ತದೆ.

14. ಈ ನಿರ್ದಿಷ್ಟ ಮೊಕದ್ದಮೆಯಲ್ಲಿ, 4(ಎ) ಕಂಡಿಕೆಗೆ ಸಂಬಂಧಿಸಿದ ರಾಜಿ ನೋಟೀಸನ್ನು ನೀಡಿದಾಗ, ಚಿಲ್ಲರೆ ವ್ಯಾಪಾರಿಯು ಮೊಕದ್ದಮೆಯನ್ನು ಬಗೆಹರಿಸಿಕೊಳ್ಳಲಿಲ್ಲವೆಂದು 5(ಎ) ಕಂಡಿಕೆಯಲ್ಲಿನ ದೂರಿನಲ್ಲಿ ಹೇಳಲಾಗಿದೆ. ಅಧಿನಿಯಮದ 31ನೇ ಪ್ರಕರಣದ ಅಡಿಯಲ್ಲಿ ಅಪರಾಧವನ್ನುಂಟು ಮಾಡುವ ಸದರಿ ಉತ್ಪನ್ನಗಳ ಖರೀದಿ ದರಪಟ್ಟಿಯನ್ನು ಸಹ ಆತನು ಸಲ್ಲಿಸಿಲ್ಲವೆಂದು ನಿವೇದಿಸಲಾಗಿದೆ. ಪ್ಯಾಕೇಜ್ ಒಳಗಿನ ವಸ್ತುಗಳ ನಿರ್ದಿಷ್ಟ ತೂಕ ಅಥವಾ

ನಿರ್ದಿಷ್ಟ ಘಟಕ ಅಥವಾ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯಾವುವೇ ಆರೋಪಗಳು ಇಲ್ಲದೆ ಇದ್ದಾಗ, ಯಾವುದೇ ತೂಕ ಅಥವಾ ಮಾಪನಕ್ಕೆ ಸಂಬಂಧಿಸಿದ ದಸ್ತಾವೇಜುಗಳನ್ನು ಹಾಜರುಪಡಿಸುವ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸದಿರುವ ಯಾವುದೇ ಪ್ರಶ್ನೆಯು, ಅಧಿನಿಯಮದ 31ನೇ ಪ್ರಕರಣವನ್ನು ಅನ್ವಯಿಸುವುದಿಲ್ಲ. ಆದುದರಿಂದ, ತೂಕ ಮತ್ತು ಮಾಪನದಲ್ಲಿ ಯಾವುದೇ ವ್ಯತ್ಯಾಸವಿದ್ದರೆ ಮತ್ತು ಆ ಪರಿಣಾಮಕ್ಕೆ ಆರೋಪವನ್ನು ಮಾಡಲಾಗಿದ್ದರೆ, ತೂಕ ಮತ್ತು ಮಾಪನವನ್ನು ನಿರ್ಧರಿಸುವ ಸಲುವಾಗಿ ಅಥವಾ ತೂಕ ಮತ್ತು ಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವುದು ಅಗತ್ಯವಾಗಿದ್ದರೆ ಮತ್ತು ತಯಾರಕನಾಗಲಿ ಅಥವಾ ಚಿಲ್ಲರೆ ವ್ಯಾಪಾರಿಯಾಗಲಿ ಅದನ್ನು ಹಾಜರುಪಡಿಸದೆ ಇದ್ದರೆ, ಆಗ ಮಾತ್ರ ಅಧಿನಿಯಮದ 31ನೇ ಪ್ರಕರಣವು ಅನ್ವಯವಾಗುತ್ತದೆ. ಆದುದರಿಂದ, ನನ್ನ ಅಭಿಪ್ರಾಯದಲ್ಲಿ, ಮೇಲೆ ಹೇಳಿದ ಮೊಕದ್ದಮೆಗಳಲ್ಲಿ, ಅಧಿನಿಯಮದ 18(1)ನೇ ಪ್ರಕರಣವಾಗಲಿ ಅಥವಾ 36(1)ನೇ ಪ್ರಕರಣವಾಗಲಿ ಅಥವಾ 31ನೇ ಪ್ರಕರಣವಾಗಲಿ ಅನ್ವಯವಾಗುವುದಿಲ್ಲ.

15. ಆದಾಗ್ಯೂ, ದೂರುಗಳಲ್ಲಿ ಮಾಡಿದ ಆರೋಪಗಳಿಂದ ಕಂಡುಬರಬಹುದಾದಂತೆ, ತಯಾರಕನ ಹೆಸರು ಮತ್ತು ವಿಳಾಸಕ್ಕೆ ಸಂಬಂಧಿಸಿದಂತೆ, ಅಷ್ಟೇ ಅಲ್ಲದೆ ತಯಾರಿಸಿದ ದಿನಾಂಕ/ ಪ್ಯಾಕ್ ಮಾಡಿದ ತಿಂಗಳು ಮತ್ತು ವರ್ಷ, ಗರಿಷ್ಠ ಚಿಲ್ಲರೆ ದರ ಹಾಗೂ ಗ್ರಾಹಕ ಸೇವಾ ದೂರವಾಣಿ ಸಂಖ್ಯೆ ಮತ್ತು ಘೋಷಿತ ಗಾತ್ರ ಹಾಗೂ ನಿರ್ದಿಷ್ಟ ಘಟಕಕ್ಕೆ ಸಂಬಂಧಿಸಿದಂತೆ ಘೋಷಣೆ ಮಾಡಿರುವುದಿಲ್ಲ. ಈ ಘೋಷಣೆಗಳನ್ನು ಮೊದಲೇ ಪ್ಯಾಕ್ ಮಾಡಿದ ಪ್ಯಾಕೇಜ್‌ಗಳ ಮೇಲೆ ಮಾಡಿರುವುದಿಲ್ಲ. ಆದುದರಿಂದ, ಕಾನೂನು ಮಾಪನ ಶಾಸ್ತ್ರ(ಪ್ಯಾಕ್ ಮಾಡಿದ ಪದಾರ್ಥಗಳ) ನಿಯಮಗಳು, 2001ರ ಮೇರೆಗೆ ಯಾವುವೇ ನಿಯಮಗಳನ್ನು ಉಲ್ಲಂಘಿಸಿದ್ದರೆ, ಆಗ, ಸದರಿ ನಿಯಮಗಳ ಉಲ್ಲಂಘನೆಯು, ಸದರಿ ನಿಯಮಗಳ 32ನೇ ನಿಯಮದ ಮೇರೆಗೆ ದಂಡನೀಯವಾದುದಾಗಿದೆ.

16. ಆದುದರಿಂದ, ಮೇಲೆ ಹೇಳಿದ ಸಂದರ್ಭಗಳ ಮೇರೆಗೆ, ಈ ಮೂಲಕ, ಮೇಲಿನ ಎಲ್ಲಾ ಮೊಕದ್ದಮೆಗಳಲ್ಲಿ, ಯಾವುವೇ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ, ಮೊಕದ್ದಮೆಯನ್ನು ಮುಂದುವರಿಸಲು ಮತ್ತು ಅವು ಸದರಿ ನಿಯಮಗಳ 32ನೇ ನಿಯಮದ ಮೇರೆಗೆ ದಂಡನೀಯವಾಗಿದ್ದರೆ, ತರುವಾಯದಲ್ಲಿ ಸದರಿ ಮೊಕದ್ದಮೆಗಳನ್ನು ಕಾನೂನಿನಗನುಸಾರವಾಗಿ ವಿಲೆ ಮಾಡಲು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿದೆ.

ತದನುಸಾರವಾಗಿ, ಎಲ್ಲಾ ಅರ್ಜಿಗಳನ್ನು ಭಾಗಶಃ ಅಂಗೀಕರಿಸಲಾಗಿದೆ.